# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

***ವಾರ್ಡ್ ಸಂಖ್ಯೆ.29 ಕಾಚರಕನಹಳ್ಳಿಗೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರ ಕಛೇರಿಯ ಸಭಾಂಗಣದಲ್ಲಿ ದಿನಾಂಕ: 05-01-2019 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು***

1) ಶ್ರೀ ಪದ್ಮನಾಭ ರೆಡ್ಡಿ, ಅಧ್ಯಕ್ಷರು, (ಬಿ.ಬಿ.ಎಂ.ಪಿ ಸದಸ್ಯರು ಹಾಗೂ ವಿರೋಧ ಪಕ್ಷದ ನಾಯಕರು)
2) ಶ್ರೀ ಆಂಜನೇಯಲು ಬಿನ್ ಚಿನ್ನಾಲಯ್ಯ, ಸದಸ್ಯರು
3) ಶ್ರೀ ಟಿ ನಾಗರಾಜ್, ಸದಸ್ಯರು
4) ಶ್ರೀಮತಿ ಸರಸ್ವತಿ, ಸದಸ್ಯರು
5) ಶ್ರೀಮತಿ ವಿನುತ.ಎ, ಸದಸ್ಯರು
6) ಶ್ರೀಮತಿ ಕೆ.ಲೀಲಾವತಿ, ಸದಸ್ಯರು
7) ಶ್ರೀ ವಿಶ್ವನಾಥನ್, ಸದಸ್ಯರು, ಅಧ್ಯಕ್ಷರು, ಜಲವಾಯು ವಿಹಾರ ಅಪಾರ್ಟ್‌ಮೆಂಟ್ ಓನರ್ಸ್ ಅಸೋಶಿಯೇಷನ್
8) ಶ್ರೀ ನಾಗರಾಜ್, ಸದಸ್ಯರು, ರೆಸಿಡೆನ್ಸ್ ವೆಲ್‌ಫೇರ್ ಅಸೋಶಿಯೇಷನ್, ಹೆಚ್.ಆರ್.ಬಿ.ಆರ್ ಬಡಾವಣೆ
9) ಶ್ರೀ ಪಿ.ವಿ ರಮಣಯ್ಯ, ಬಿನ್ ವೆಂಕಟಸುಬ್ಬಯ್ಯ, ಸದಸ್ಯರು
10) ಶ್ರೀ ಎ.ಕ್ಸೇವಿಯರ್, ಸದಸ್ಯರು
11) ಶ್ರೀ ಹೆಚ್.ವಿ.ಕೃಷ್ಣಾರೆಡ್ಡಿ, ಕಾರ್ಯದರ್ಶಿ ಮತ್ತು ಸಂಚಾಲಕರು

**ಈ ಸಭೆಗೆ ಹಾಜರಾಗಿದ್ದ** ಮೇಲ್ಕಂಡ ಸದಸ್ಯರು, ವಾರ್ಡಿನ ಕಾರ್ಯದರ್ಶಿ ಹಾಗೂ ಸಂಚಾಲಕರು ರವರುಗಳನ್ನು ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

1) ಶ್ರೀ ಆಂಜನೇಯಲು ಬಿನ್ ಚಿನ್ನಾಲಯ್ಯ, ಸದಸ್ಯರು, ಮಾತನಾಡಿ ಕೀರ್ತಿ ಬಡಾವಣೆ ಹಾಗೂ ಕಮ್ಮನಹಳ್ಳಿ ಭಾಗದಲ್ಲಿ ಹಲವು ರಸ್ತೆಗಳಿಗೆ ಬೀದಿದೀಪಗಳಿಗೆ ಆಟೋಮ್ಯಾಟಿಕ್ ಸ್ವಿಚ್‌ಬೋರ್ಡ್‌ಗಳನ್ನು ಹಾಕಿರುವುದಿಲ್ಲ ಎಂದು ಸಭಾ ಗಮನಕ್ಕೆ ತಂದಾಗ ಸಭೆಯಲ್ಲಿ ಹಾಜರಿದ್ದ ಬೀದಿ ದೀಪ ವಿಭಾಗ ರವರು ಅತೀ ಶೀಘ್ರದಲ್ಲಿ ಆಟೋಮ್ಯಾಟಿಕ್ ಸ್ವಿಚ್ ಬೋರ್ಡ್‌ಗಳನ್ನು ಅಳವಡಿಸಿ, ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವುದಾಗಿ ಸಭೆಯಲ್ಲಿ ತಿಳಿಸಿರುತ್ತಾರೆ.

2) ಶ್ರೀ ಎ.ಕ್ಸೇವಿಯರ್, ಸದಸ್ಯರು, ಹಾಗೂ ನಾಗರಾಜ್, ಸದಸ್ಯರು ಮಾತನಾಡುತ್ತಾ, ಕಮ್ಮನಹಳ್ಳಿಯ 5ನೇ ಮುಖ್ಯರಸ್ತೆ, ರಾಮಯ್ಯ ಲೇಔಟ್, ಅಜ್ಮಲ್ಲಪ್ಪ ಬಡಾವಣೆಗಳಲ್ಲಿ ರಸ್ತೆಗಳಿಗೆ ಡಾಂಬರೀಕರಣ ಮಾಡುವಂತೆ ಸಭೆಯಲ್ಲಿ ಪ್ರಸ್ತಾಪಿಸಿದಾಗ, ಸದರಿ ರಸ್ತೆಗಳಲ್ಲಿ ಎಲ್.ಪಿ.ಜಿ ಗ್ಯಾಸ್‌ಲೈನ್ ಅಳವಡಿಸುವ ಕಾಮಗಾರಿಯು ಪ್ರಗಿಯಲ್ಲಿದ್ದು, ಕಾಮಗಾರಿಯು ಪೂರ್ಣಗೊಂಡ ನಂತರ ಡಾಂಬರೀಕರಣ ಕಾಮಗಾರಿಯನ್ನು ಕೈಗೊಳ್ಳಲಾಗುವುದೆಂದು ಮಾನ್ಯ ಅಧ್ಯಕ್ಷರು ಸಭೆಗೆ ಸೂಚಿಸಲಾಯಿತು. ಹಾಗೂ ಪೌರ ಕಾರ್ಮಿಕರು ರಸ್ತೆಗಳಲ್ಲಿ ಕಸವನ್ನು ಗುಡಿಸಿ, ಕಸವನ್ನು ಒಂದು ಕಡೆ ಗುಡ್ಡೆ ಹಾಕುತ್ತಿರುವುದಾಗಿ, ಸಭೆಗೆ ತಿಳಿಸಿದಾಗ ಸಭೆಯಲ್ಲಿ ಹಾಜರಿದ್ದ ಹಿರಿಯ ಆರೋಗ್ಯ ನಿರೀಕ್ಷಕರು ರಸ್ತೆಯಲ್ಲಿ ಕಸವನ್ನು ಗುಡಿಸಿ ಒಂದು ಕಡೆ ಗುಡ್ಡೆ ಮಾಡಿ ತದನಂತರ ಆಟೋ ಟಿಪ್ಪರ್‌ಗೆ ತುಂಬಿ ಅದನ್ನು ಕಾಂಪ್ಯಾಕ್ಟರ್ ಇರುವ ಸ್ಥಳಕ್ಕೆ ಸಾಗಿಸಿ, ವಿಲೇವಾರಿ

ಮಾಡಲಾಗುವುದೆಂದು ಸಭಾ ಗಮನಕ್ಕೆ ತಂದಾಗ, ಮಾನ್ಯ ಅಧ್ಯಕ್ಷರು, ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಆಟೋ ಟಿಪ್ಪರ್‌ಗಳನ್ನು ದಿನದಲ್ಲಿ 2–3 ಬಾರಿ ಕಸವನ್ನು ತುಂಬಿಸಿ, ಕಾಂಪ್ಯಾಕ್ಟರ್‌ಗಳಿಗೆ ಹಾಕುವಂತೆ ಆರೋಗ್ಯ ನಿರೀಕ್ಷಕರಿಗೆ ಸೂಚಿಸಲಾಯಿತು.

3) ಶ್ರೀಮತಿ ಕೆ.ಲೀಲಾವತಿ, ಸದಸ್ಯರು, ಮಾತನಾಡಿ, ರಾಮಯ್ಯ ಬಡಾವಣೆಯಲ್ಲಿ ಬಾಕಿ ಇರುವ ರಸ್ತೆಗಳಲ್ಲಿ ಗ್ಯಾಸ್ ಪೈಪ್‌ಲೈನ್ ಅಳವಡಿಸುವ ಕಾಮಗಾರಿಯು ಪೂರ್ಣಗೊಂಡ ನಂತರವೇ ಡಾಂಬರೀಕರಣ ಕಾಮಗಾರಿ ಕೈಗೊಳ್ಳಬೇಕೆಂದು ಸಭಾ ಗಮನಕ್ಕೆ ತಂದಾಗ, ಸಭೆಯಲ್ಲಿ ಚರ್ಚಿಸಿ, ಗ್ಯಾಸ್ ಪೈಪ್‌ಲೈನ್‌ಗಳ ಕಾಮಗಾರಿ ಪೂರ್ಣಗೊಂಡ ನಂತರವೇ ಡಾಂಬರೀಕರಣ ಕಾಮಗಾರಿಯನ್ನು ಕೈಗೊಳ್ಳಲಾಗುವುದೆಂದು ಸಭೆಗೆ ಮಾನ್ಯ ಅಧ್ಯಕ್ಷರು ತಿಳಿಸಿದರು.

4) ಶ್ರೀಮತಿ ವಿನುತ.ಎ, ಸದಸ್ಯರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಮರಗಳನ್ನು ಟ್ರಿಮ್ ಮಾಡಿದ ಎಲೆ ಮತ್ತು ರೆಂಬೆ ಕೊಂಬೆಗಳನ್ನು ಅಲ್ಲಲ್ಲಿ ರಸ್ತೆಗಳಲ್ಲಿದ್ದು, ಅವುಗಳನ್ನು ಕೂಡಲೇ ಸದರಿ ಸ್ಥಳದಿಂದ ತೆರವುಗೊಳಿಸಲು ಸಭೆಯಲ್ಲಿ ತಿಳಿಸಿದಾಗ, ಸಭೆಯಲ್ಲಿ ಹಾಜರಿದ್ದ ಆರೋಗ್ಯ ನಿರೀಕ್ಷಕರು ರವರಿಗೆ ಕೂಡಲೇ ಈ ಬಗ್ಗೆ ಕ್ರಮ ವಹಿಸಲು ಮಾನ್ಯ ಅಧ್ಯಕ್ಷರು ಸೂಚಿಸಿದರು ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಡೋರ್ ಟು ಡೋರ್ ಕಲೆಕ್ಷನ್ ಸಮರ್ಪಕವಾಗಿ ನಡೆಯುತ್ತಿಲ್ಲ ಎಂದು ರಸ್ತೆ ಗುಡಿಸುವಿಕೆ ಸಹ ಸಮರ್ಪಕವಾಗಿ ನಡೆಯುತ್ತಿಲ್ಲ ಎಂದು ಸಭೆಯಲ್ಲಿ ಚರ್ಚಿಸಿ, ಈ ಬಗ್ಗೆ ತೀವ್ರ ನಿಗಾ ವಹಿಸಲು ಹಾಗೂ ಪ್ರತಿ ನಿತ್ಯ ಗ್ಯಾಂಗ್‌ವರ್ಕ್ ನಿಯೋಜಿಸಲು ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಆರೋಗ್ಯ ನಿರೀಕ್ಷಕರು ರವರಿಗೆ ಸೂಚಿಸಿದರು.

5) ಬೆಸ್ಕಾಂ ವಿಭಾಗದ ಅಧೀಕ್ಷಕ ಅಭಿಯಂತರರು ವಾಡ್ ಪ್ರದೇಶದಲ್ಲಿ ತುರ್ತಾಗಿ ವಿದ್ಯುತ್ ಕಾಮಗಾರಿಗಳನ್ನು ಕೈಗೊಳ್ಳಲು ಅನುಮತಿ ನೀಡಿರುವುದರಿಂದ ವಾರ್ಡ್ ಸಮಿತಿ ಸಭೆಯಿಂದ ಅಭಿನಂದನೆ ಸಲ್ಲಿಸಲಾಯಿತು ಹಾಗೂ ಸಭೆಯಲ್ಲಿ ಹಾಜರಿದ್ದ ಬೆಸ್ಕಾಂನ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ರವರಿಗೆ ಕೂಡಲೇ ಕಾಮಗಾರಿಯನ್ನು ಪ್ರಾರಂಭಿಸುವಂತೆ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

6) ಶ್ರೀ ಪಿ.ವಿ ರಮಣಯ್ಯ, ಬಿನ್ ವೆಂಕಟಸುಬ್ಬಯ್ಯ, ಸದಸ್ಯರು ಮಾತನಾಡಿ ಆಯಿಲ್ ಮಿಲ್ ರಸ್ತೆಯಲ್ಲಿ ಪದೇ ಪದೇ ವಿದ್ಯುತ್ ಸರಬರಾಜು ಕಡಿತವಾಗುತ್ತಿರುತ್ತದೆ. ಆಯಿಲ್ ಮಿಲ್ ರಸ್ತೆ, 1ನೇ ಕ್ರಾಸ್‌ನಲ್ಲಿ ಎರಡು ವಿದ್ಯುತ್ ಕಂಬ, ರಾಮಯ್ಯ ಬಡಾವಣೆಯಲ್ಲಿ ಎರಡು ಕಂಬ, 5ನೇ ಎ ಕ್ರಾಸ್‌ನಲ್ಲಿ ಎರಡು ಕಂಬಗಳು ಇರುವುದಿಲ್ಲವೆಂದು ವಿದ್ಯುತ್ ಕಂಬಗಳನ್ನು ಅಳವಡಿಸಿ ಎಲ್ಇಡಿ ಲೈಟ್‌ಗಳನ್ನು ಅಳವಡಿಸಲು ಸಭೆಯ ಗಮನಕ್ಕೆ ತಂದಾಗ, ಈ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ, ಬೆಸ್ಕಾಂ ವಿಭಾಗರವರಿಗೆ ಟ್ಯೂಬಲರ್

ಕಂಬಗಳನ್ನು ತೆಗೆದ ನಂತರ ಬೆಸ್ಕಾಂ ರವರಿಗೆ ಅಳವಡಿಸಲು ಸಭೆ ತೀರ್ಮಾನಿಸಲಾಯಿತು. ಈ ಬಗೆ ಕ್ರಮ ವಹಿಸಲು ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಬೆಸ್ಕಾಂ ಇಂಜಿನಿಯರ್‌ರವರಿಗೆ ಸೂಚಿಸಿದಾಗ ಇಂಜಿನಿಯರ್‌ಗಳು 2–3 ತಿಂಗಳಲ್ಲಿ ಕ್ರಮ ವಹಿಸುವುದಾಗಿ ಸಭೆಗೆ ಭರವಸೆ ನೀಡಿದರು.

6) (a) ಶ್ರೀ ಆಂಜನೇಯಲು ಬಿನ್ ಚಿನ್ನಾಲಯ್ಯ, ಸದಸ್ಯರು, ಮಾತನಾಡಿ ಓ ಕ್ರಾಸ್‌ನಲ್ಲಿ ಒಂದು ಮಾರುತಿ ಕಾರ್, ರಾಮಯ್ಯ ಲೇಔಟ್ ಮುಖ್ಯರಸ್ತೆಯ ಪಾದಾಚಾರಿ ರಸ್ತೆಯಲ್ಲಿ, ಒಂದು ಕಾರ್, 4ನೇ ಇ ಕ್ರಾಸ್ ಹೆಚ್.ಆರ್.ಬಿ.ಆರ್ 3ನೇ ಬ್ಲಾಕ್‌ನಲ್ಲಿ ಒಂದು ಕಾರ್, ಹೆಚ್.ಡಿ.ಎಫ್.ಸಿ ಬ್ಯಾಂಕ್ ಹತ್ತಿರ ಒಂದು ಕಾರ್, ನೆಹರು ರಸ್ತೆ ಹಾನೆಸ್ಟ್ ಬೇಕರಿ ಹತ್ತಿರ ಒಂದು ಕಾರು ಒಂದು ವರ್ಷದಿಂದ ಇರುವುದಾಗಿ, ಈ ಹಳೆಯ ಕಾರುಗಳನ್ನು ಸದರಿ ಸ್ಥಳದಿಂದ ಸ್ಥಳಾಂತರಿಸಲು ಸಭೆಯ ಗಮಕ್ಕೆ ತಂದಾಗ ಸಭೆಯಲ್ಲಿ ಹಾಜರಿದ್ದ ಸಂಚಾರಿ ಸಬ್‌ಇನ್‌ಸ್ಪೆಕ್ಟರ್ ರವರು ಅತೀ ತುರ್ತಾಗಿ ಸ್ಥಳಾಂತರಿಸಲಾಗುವುದೆಂದು ಸಭೆಗೆ ಭರವಸೆಯನ್ನು ಸಭೆಗೆ ತಿಳಿಸಿರುತ್ತಾರೆ.

7) ಸದಸ್ಯರಾದ ಶ್ರೀಮತಿ ವಿನುತ ಮತ್ತು ಸರಸ್ವತಿ ರವರು ಮಾತನಾಡಿ ಆಯಿಲ್ ಮಿಲ್ ರಸ್ತೆ ಹಾಗೂ 5ನೇ ಮುಖ್ಯರಸ್ತೆಯಲ್ಲಿ ದ್ವಿಚಕ್ರ ವಾಹನ ಪಾರ್ಕಿಂಗ್ ಸಮಸ್ಯೆ ಇರುವುದಾಗಿ ತಿಳಿಸುತ್ತಾ, ವಾಹನಗಳ ನಿಲುಗಡೆಯನ್ನು ರಸ್ತೆಯ ಒಂದು ಕಡೆ ಮಾಡಲು ಅನುಮತಿ ನೀಡಲು ಸಭೆ ಗಮನಕ್ಕೆ ತಂದಾಗ ಕೂಲಂಕುಷವಾಗಿ ಚರ್ಚಿಸಿ, ಮಾನ್ಯ ಅಧ್ಯಕ್ಷರು ಈ ಬಗ್ಗೆ ಚರ್ಚಿಸಿ ಕೂಡಲೇ ಪೋಲೀಸ್ ಇಲಾಖೆಯ ಮೇಲಾಧಿಕಾರಿಗಳಿಗೆ ಪತ್ರ ಬರೆಯಲು ಸರ್ವಾನುಮತದಿಂದ ಸಭೆ ತೀರ್ಮಾನಿಸಲಾಯಿತು.

8) ಕಮ್ಮನಹಳ್ಳಿ ಮುಖ್ಯರಸ್ತೆಯಲ್ಲಿ ಪಾದಾಚಾರಿ ಮಾರ್ಗದಲ್ಲಿ ಹಲವಾರು ಅಂಗಡಿಗಳನ್ನು ಇಟ್ಟು ವ್ಯಾಪಾರ ವಹಿವಾಟು ಮಾಡುತ್ತಿದ್ದು, ಇದರಿಂದ ಸಾರ್ವಜನಿಕರ ಓಡಾಟಕ್ಕೆ ಹಾಗೂ ವಾಹನ ಸಂಚಾರಕ್ಕೆ ತೊಂದರೆಯಾಗುತ್ತದೆ ಎಂದು ಸಭೆಯಲ್ಲಿ ಅನೇಕ ಸದಸ್ಯರು ಮಾತನಾಡಿದಾಗ ಈ ಬಗ್ಗೆ ಮಾನ್ಯ ಅಧ್ಯಕ್ಷರು ವಿವರಣೆ ನೀಡುತ್ತಾ, ಕಮ್ಮನಹಳ್ಳಿ ಮುಖ್ಯರಸ್ತೆಯಲ್ಲಿ ಪಾದಾಚಾರಿ ಮಾರ್ಗ ಅಭಿವೃದ್ಧಿ ಪ್ರಗತಿಯಲ್ಲಿದ್ದು, ಕಾಮಗಾರಿಗೆ ಸಹಕರಿಸಲು ತಾತ್ಕಾಲಿಕ ಅಂಗಡಿಗಳು ತಳ್ಳುಗಾಡಿಗಳು ಬಿಟ್ಟು ಸ್ಥಿರವಾಗಿ ಇಟ್ಟುಕೊಂಡಿರುವ ಅಂಗಡಿಗಳನ್ನು ತೆರವುಗೊಳಿಸಲು ದಿನಾಂಕವನ್ನು ನಿಗಧಿಪಡಿಸಿಕೊಂಡು ಪೋಲೀಸ್ ಠಾಣೆ, ಕಾನೂನು ಸುವ್ಯವಸ್ಥೆ ಮತ್ತು ಸಂಚಾರ ರವರಿಗೆ ಪತ್ರ ಬರೆದು ಸದರಿ ದಿನಾಂಕದಂದು ಸಂಬಂಧಪಟ್ಟ ಸಹಾಯಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಾರ್ಯಪಾಲಕ ಅಭಿಯಂತರರು ಹಾಗೂ ಆರೋಗ್ಯ ನಿರೀಕ್ಷಕರು ಸೇರಿದಂತೆ ಎಲ್ಲಾ ಅಧಿಕಾರಿಗಳು ಹಾಜರಿದ್ದು, ತೆರವು ಕಾರ್ಯಾಚರಣೆಯನ್ನು ಕೈಗೊಳ್ಳಬೇಕೆಂದು ಸೂಚಿಸಲಾಯಿತು.

9) ಕಂದಾಯ ವಿಭಾಗದಿಂದ 18 ವರ್ಷ ತುಂಬಿದ ವಯೋಮಾನದವರಿಗೆ ಮತದಾನದ ನೊಂದಣಿ ಮಾಡಲು ಹಾಗೂ ಮತದಾನದಂದು ಗೈರಾಗದೇ ಮತದಾನ ಮಾಡುವಂತೆ ಮತದಾರರಿಗೆ ಮನವರಿಕೆ ಮಾಡಲು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರಿಗೆ ಮಾನ್ಯ ಅಧ್ಯಕ್ಷಕರು ಸೂಚಿಸಿದರು ಮತ್ತು ಮತದಾನ ಸಂವಿಧಾನ ಬದ್ದ ಹಕ್ಕು ಅದನ್ನು ಎಲ್ಲರೂ ತಪ್ಪದೇ ಚಲಾಯಿಸಬೇಕು. ಈ ಬಗ್ಗೆ ಸಾರ್ವಜನಿಕರಲ್ಲಿ ಪ್ರಚಾರ ಮಾಡಬೇಕು ಎಂದು ಸಭೆಗೆ ಮಾನ್ಯ ಅಧ್ಯಕ್ಷರು ಸೂಚಿಸಿದರು. ಸಭೆಯಲ್ಲಿ ಹಾಜರಿದ್ದ ಕಂದಾಯ ಅಧಿಕಾರಿಗಳನ್ನು ತೆರಿಗೆ ಸಂಗ್ರಹದ ಬಗ್ಗೆ ಮಾಹಿತಿಯನ್ನು ನೀಡಿ. ರೂ.401 ಲಕ್ಷಗಳನ್ನು ಸಂಗ್ರಹಿಸಲು ಗುರಿ ಹೊಂದಿರುವುದಾಗಿ ಸಭೆಗೆ ತಿಳಿಸಿದಾಗ ಸಭೆಯಲ್ಲಿ ಸಾರ್ವಜನಿಕರಿಂದ ತೆರಿಗೆ ಸಂಗ್ರಹಿಸುವಾಗ ಪ್ರೀತಿ ವಿಶ್ವಾಸದಿಂದ ವರ್ತಿಸಲು ಸಭೆ ಸೂಚಿಸಲಾಯಿತು. ಇನ್ನು 118 ಕಟ್ಟಡಗಳು ಬಾಕಿ ಇದ್ದು, ಈ ಪೈಕಿ 40 ಕಟ್ಟಡಗಳನ್ನು ಮಾತ್ರ ಪಾವತಿಸಿರುತ್ತಾರೆ ಎಂಬುದಾಗಿ ಕಂದಾಯ ವಿಭಾಗದವರು ಸಭೆಗೆ ತಿಳಿಸಿದರು.

10) ಶ್ರೀ ಪಿ.ವಿ ರಮಣಯ್ಯ, ಬಿನ್ ವೆಂಕಟಸುಬ್ಬಯ್ಯ, ಸದಸ್ಯರು ಮಾತನಾಡಿ, ಕಮ್ಮನಹಳ್ಳಿಯಲ್ಲಿ 8 ಮ್ಯಾನ್‌ಹೋಲ್ ಛೇಂಬರ್‌ಗಳನ್ನು ಎತ್ತರಕ್ಕೆ ಏರಿಸಿ ನಿರ್ಮಿಸಿಕೊಡಬೇಕೆಂದು ಸಭೆಗೆ ತಿಳಿಸಿದಾಗ ಸಭೆಯಲ್ಲಿ ಹಾಜರಿದ್ದ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಇಂಜಿನಿಯರ್ ರವರು ಸದರಿ ಪ್ರದೇಶದ ಛೇಂಬರ್‌ಗಳನ್ನು ಕೂಡಲೇ ಎತ್ತರಿಸಿ, ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವುದಾಗಿ ಸಭೆಗೆ ತಿಳಿಸಿದರು. ಮಂಗಳ ಲೇಔಟ್ 17ನೇ ಕ್ರಾಸ್‌ನಲ್ಲಿ ಒಂದು ಹೆಚ್ಚುವರಿ ಮ್ಯಾನ್‌ಹೋಲ್‌ನ್ನು ನಿರ್ಮಿಸಿಕೊಡಬೇಕೆಂದು ಸದಸ್ಯರು ಕೋರಿದಾಗ ಇಂಜಿನಿಯರ್‌ರವರು ನಿರ್ಮಿಸಿಕೊಡುವುದಾಗಿ ಭರವಸೆ ನೀಡಿದರು.

11) ಶ್ರೀಮತಿ ಕೆ.ಲೀಲಾವತಿ, ಸದಸ್ಯರು, ಮಾತನಾಡಿ, ರಾಮಯ್ಯ ಬಡಾವಣೆ, ಮುನ್ನಿ ಬಡಾವಣೆ 1ನೇ ಕ್ರಾಸ್, 2ನೇ ಕ್ರಾಸ್, ಬಿಡಿಎ ಲೇಔಟ್, ಹೆಣ್ಣೂರು ಮುಖ್ಯರಸ್ತೆ, ಹೆಚ್.ಬಿ.ಆರ್ ಆಯಿಲ್ ಮಿಲ್ ರಸ್ತೆ, ಯಾದವ ಬಡಾವಣೆ, ಪೀಸ್ ಬಡಾವಣೆ, ಗುರುಶಂಕರಪ್ಪ ಬಡಾವಣೆ, ಹನುಮಪ್ಪ ಬಡಾವಣೆ ಈ ಪ್ರದೇಶದ ರಸ್ತೆಗಳಲ್ಲಿ ಒಳಚರಂಡಿ ಪೈಪ್‌ಲೈನ್ ಹಾಗೂ ಕಾವೇರಿ ಪೈಪ್‌ಲೈನ್ ಅಳವಡಿಸಿರುವುದಿಲ್ಲ ಎಂದು ಸಭೆಯ ಗಮನಕ್ಕೆ ತಂದಾಗ, ಮಾನ್ಯ ಅಧ್ಯಕ್ಷರು ಮಾತನಾಡಿ, ಇಡೀ ವಾರ್ಡ್ ಪ್ರದೇಶದಲ್ಲಿ ಬಾಕಿ ಇರುವ ರಸ್ತೆಗಳ ಒಳಚರಂಡಿ ಪೈಪ್‌ಲೈನ್ನು ಅಳವಡಿಸುವುದು ಹಾಗೂ ನೀರು ಸರಬರಾಜು ಪೈಪ್‌ಲೈನ್ ಅಳವಡಿಸಲು ಕಾಮಗಾರಿಗಾಗಿ ಕೇಂದ್ರ ಸರ್ಕಾರದ ಅನುದಾನದಿಂದ (14ನೇ ಹಣಕಾಸು ಆಯೋಗದಿಂದ) ರೂ.82.5 ಲಕ್ಷ ಗಳು ಮಂಜೂರಾಗಿದ್ದು, ವಾರ್ಡ್ ಪ್ರದೇಶದಲ್ಲಿ ಬಾಕಿ ಇರುವ ರಸ್ತೆಗಳಲ್ಲಿ ಪೈಪ್‌ಲೈನ್‌ನ ಕಾಮಗಾರಿ ಕೈಗೊಳ್ಳಲು ಡಿಮ್ಯಾಂಡ್ ನೋಟನ್ನು ತಯಾರಿಸಿಕೊಡಲು ಸಭೆಯಲ್ಲಿ ಹಾಜರಿದ್ದ ಬಿ.ಡ.ಬ್ಲ್ಯೂ ಎಸ್.ಎಸ್.ಬಿ ಇಂಜಿನಿಯರ್ ರವರಿಗೆ ಮಾನ್ಯ ಅಧ್ಯಕ್ಷರು ಸೂಚಿಸಿದರು.

12) ಶ್ರೀ ಆಂಜನೇಯಲು ಬಿನ್ ಚಿನ್ನಾಲಯ್ಯ, ಸದಸ್ಯರು ಮಾತನಾಡಿ, ಕಮ್ಮನಹಳ್ಳಿ ಮುಖ್ಯರಸ್ತೆಯ ಸುಖ್‌ಸಾಗರ್ ಹೋಟೆಲ್ ಹತ್ತಿರ ಹಾಗೂ 5ನೇ ಮುಖ್ಯರಸ್ತೆಗಳಲ್ಲಿ ರಾಮಯ್ಯ ಬಡಾವಣೆ, ಡಿ ಕ್ರಾಸ್ ಹೆಣ್ಣೂರು ಮುಖ್ಯರಸ್ತೆ, ನಾಲಾ ರಸ್ತೆಗಳಲ್ಲಿ ನೈಜೀರಿಯನ್, ಸೌತ್ ಆಫ್ರಿಕಾ, ಉಗಾಂಡಾ ದೇಶಗಳ ವಿದೇಶಿ ವಿದ್ಯಾರ್ಥಿಗಳು ಹಾಗೂ ಪುಂಡ ಪೋಕರಿಗಳು ರಾತ್ರಿ ಸಮಯದಲ್ಲಿ ಗಾಂಜಾ ಅಫೀಮು ಸೇವಿಸುವುದು, ಬಿಯರ್ ಕುಡಿದು ದಾಂಧಲೆ ಮಾಡುತ್ತಿರುವುದಾಗಿ ಸಭಾ ಗಮನಕ್ಕೆ ತಂದಾಗ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿ, ಈ ಬಗ್ಗೆ ಕಾನೂನು ಸುವ್ಯವಸ್ಥೆಯ ಆರಕ್ಷಕ ಠಾಣೆಗೆ ಪತ್ರ ಬರೆಯಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಹಾಗೂ ಕೀರ್ತಿ ಬಡಾವಣೆಯ 4ನೇ ಡಿ ಕ್ರಾಸ್‌ನಲ್ಲಿ ಪಾದಾಚಾರಿ ರಸ್ತೆಯ ಮೇಲೆ ಅಂಗಡಿಗಳಿದ್ದು, ತೆರವುಗೊಳಿಸಲು ಸಭೆ ಗಮನಕ್ಕೆ ತಂದಾಗ ಸಭೆ ತೀರ್ಮಾನಿಸಿದಂತೆ ಪೋಲೀಸರಿಗೆ ಪತ್ರ ಬರೆಯಲು ಮಾನ್ಯ ಅಧ್ಯಕ್ಷರು ಸೂಚಿಸಿದರು.

13) ಶ್ರೀ ಪಿ.ವಿ ರಮಣಯ್ಯ, ಬಿನ್ ವೆಂಕಟಸುಬ್ಬಯ್ಯ, ಸದಸ್ಯರು ಮಾತನಾಡಿ, ಕಾಳಿದಾಸ ರಸ್ತೆ, ರಾಮಯ್ಯ ಬಡಾವಣೆ, ಲೂಯಿಸ್ ಹೌಸ್ ಹತ್ತಿರ, ಬೀದಿದೀಪಗಳನ್ನು ಅಳವಡಿಸಲು ಸಭೆಯಲ್ಲಿ ಪ್ರಸ್ತಾಪಿಸಿದಾಗ ಸಭೆಯಲ್ಲಿ ಹಾಜರಿದ್ದ ಬೀದಿ ಬೀಪಗಳ ವಿಭಾಗದವರು ಕ್ರಮ ವಹಿಸುವುದಾಗಿ ಸಭೆಗೆ ಭರವಸೆ ನೀಡಿದರು. ಹಾಗೂ ವಾರ್ಡ್ ಪ್ರದೇಶದಲ್ಲಿ Scientific Speed Braker ಗಳನ್ನು ಅಳವಡಿಸಲು ಸಭಾ ಗಮನಕ್ಕೆ ತಂದಾಗ ಮಾನ್ಯ ಅಧ್ಯಕ್ಷರು ಈ ಬಗ್ಗೆ ಚರ್ಚಿಸಿ, ವಾಡ್ ಪ್ರದೇಶದ ಪ್ರಮುಖ ಸಂಚಾರ ದಟ್ಟಣೆಯ ರಸ್ತೆಗಳಲ್ಲಿ 25 ಸಂಖ್ಯೆಯ Modern Scientific Speed Braker ಗಳನ್ನು ಅಳವಡಿಸಲು ಕಾರ್ಯಪಾಲಕ ಅಭಿಯಂತರರು, Traffic Engineering Cell ರವರಿಗೆ ಪತ್ರ ಬರೆಯಲು ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಸಹಾಯಕ ಇಂಜಿನಿಯರ್ ರವರಿಗೆ ಸೂಚಿಸಿದರು.

14) ಶ್ರೀ ಎ.ಕ್ಸೇವಿಯರ್, ಸದಸ್ಯರು, ಮಾತನಾಡುತ್ತಾ, ಹೆಣ್ಣೂರು ಮುಖ್ಯರಸ್ತೆ ಶೆಲ್ ಪೆಟ್ರೋಲ್ ಬಂಕ್‌ನಿಂದ ರಾಮ ಟೆಂಪಲ್ ಜಂಕ್ಷನ್ ವರೆಗೆ ಪ್ರತಿ ನಿತ್ಯ ಟ್ರಾಫಿಕ್ ಜಾಮ್ ಆಗುತ್ತದ್ದು, ವಾಹನ ಸಂಚಾರಕ್ಕೆ ಬಹಳ ತೊಂದರೆಯಾಗುತ್ತದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದಾಗ ಸಭೆಯಲ್ಲಿ ಹಾಜರಿದ್ದ ಸಂಚಾರಿ ಪೋಲೀಸ್ ಇನ್ಸ್‌ಪೆಕ್ಟರ್ ಇದಕ್ಕೆ ಧ್ವನಿಗೂಡಿಸಿ, ಸದರಿ ಪ್ರದೇಶದಲ್ಲಿ ರಸ್ತೆ ವಿಭಜಕ ಅಳವಡಿಸಲು ಕೋರಿದಾಗ, ಮಾನ್ಯ ಅಧ್ಯಕ್ಷರು ಈ ಬಗ್ಗೆ ಚರ್ಚಿಸಿ, ಆ ರಸ್ತೆಯಲ್ಲಿ ಫ್ಲೈ ಓವರ್ ನಿರ್ಮಿಸುವ ವರೆಗೆ ರಸ್ತೆಗೆ ವಿಭಜಕ ಅಳವಡಿಸಲು (Traffic Engineering Cell, BBMP) ರವರಿಗೆ ಪತ್ರ ಬರೆಯಲು ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಇಂಜಿನಿಯರಿಂಗ್ ರವರಿಗೆ ಸೂಚಿಸಿದರು.

15) ಶ್ರೀಮತಿ ಸರಸ್ವತಿ, ಸದಸ್ಯರು ಮಾತನಾಡಿ, ಜಲವಾಯು ವಿಹಾರ್ ಹತ್ತಿರ ಹಾಲೀ ಇರುವ ಆಟೋ ಸ್ಟ್ಯಾಂಡ್‌ನಲ್ಲಿ ಆಟೋ ಚಾಲಕರು ಪ್ರಯಾಣಿಕರು ಕರೆದ ಕಡೆ ಬರುವುದಿಲ್ಲ ಎಂಬ ವಿಷಯವನ್ನು ಪ್ರಸ್ತಾಪಿಸಿದಾಗ ಸಭೆಯಲ್ಲಿ ಸಂಚಾರಿ ಪೋಲೀಸ್ ಇನ್ಸ್‌ಪೆಕ್ಟರ್ ರವರು ಈ ವಿಷಯವನ್ನು ಪರಿಶೀಲಿಸುವುದಾಗಿ ಸಭೆಗೆ ಭರವಸೆ ನೀಡಿದರು.

16) ಶ್ರೀ ಪಿ.ವಿ ರಮಣಯ್ಯ, ಬಿನ್ ವೆಂಕಟಸುಬ್ಬಯ್ಯ, ಸದಸ್ಯರು ಮಾತನಾಡಿ, ಕಾಚರಕನಹಳ್ಳಿಯಲ್ಲಿನ ವಾಲ್ಮೀಕಿ ರಸ್ತೆಯಲ್ಲಿ 20–30 ಮನೆಗಳನ್ನು ಕಟ್ಟಿ ಬಾಡಿಗೆಗೆ ಕೊಟ್ಟು ಕಾವೇರಿ ನೀರು ಹಾಗೂ ಒಳಚರಂಡಿ ಸಂಪರ್ಕಗಳನ್ನು ಅನಧಿಕೃತವಾಗಿ ಪಡೆದಿರುತ್ತಾರೆ. ಇದರ ಬಗ್ಗೆ ಕ್ರಮ ಕೈಗೊಳ್ಳುವಂತೆ ಪ್ರಸ್ತಾಪಿಸಿದಾಗ, ಸಭೆಯಲ್ಲಿ ಚರ್ಚಿಸಲಾಗಿ ಸಭೆಯಲ್ಲಿ ಹಾಜರಿದ್ದ ಬಿ.ಡ.ಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳು ಕ್ರಮ ವಹಿಸುವುದಾಗಿ ಸಭೆಗೆ ಭರವಸೆ ನೀಡಿದರು.

ಕೊನೆಯದಾಗಿ ಮಾನ್ಯ ಅಧ್ಯಕ್ಷರು ಮಾತನಾಡಿ, ಈ ಸಭೆಗೆ ಗೈರಾಗಿದ್ದ ಅನೇಕ ಇಲಾಖಾ ಅಧಿಕಾರಿಗಳನ್ನು ಮುಂದಿನ ಸಭೆಗೆ ಹಾಜರಾಗಲು ತಿಳಿಸಲು ಸೂಚಿಸಿದರು ಇಷ್ಟು ವಿಷಯಗಳನ್ನು ತಿಳಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

*ಪದ್ಮನಾಭ ರೆಡ್ಡಿ*
*ಕಾರ್ಪೋರೇಟರ್, ವಾರ್ಡ್ ಸಂಖ್ಯೆ.29*
*ಕಾಚರಕನಹಳ್ಳಿ*
*ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ*

***ಪ್ರತಿಯನ್ನು***

1) ಅಪರ / ಜಂಟಿ ಆಯುಕ್ತರರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಮುಖ್ಯ ಅಭಿಯಂತರರು (ಪೂ) ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರ ಅವಗಾಹನೆಗಾಗಿ.
4) ಸಹಾಯಕ ಅಭಿಯಂತರರು (ವಾರ್ಡ್ ಸಂಖ್ಯೆ.29) ರವರಿಗೆ
5) ಕಮಿಟಿಯ ಸದಸ್ಯರಿಗೆ.
6) ಕಛೇರಿ ಕಡತಕ್ಕೆ.